**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ ಸಿ ನಂ:1057-2022**

| | | | |
|---|---|---|---|
| ಸಾಕ್ಷಿಯ ಹೆಸರು | : ಡಾ: ಸಂತೋಷ್ ಟಿ.ಕೆ. | ಸಿ.ಡಬ್ಲ್ಯು | 14 |
| ತಂದೆಯ ಹೆಸರು | : ಭಾಸ್ಕರಪ್ಪ | ಪಿ.ಡಬ್ಲ್ಯು | 3 |
| ವಯಸ್ಸು | : 40 ವರ್ಷ | | |
| ಉದ್ಯೋಗ | : ವೈಧ್ಯಾಧಿಕಾರಿಗಳು | | |
| ವಾಸ ಸ್ಥಳ | : ತರೀಕೆರೆ | | |

ದಿನಾಂಕ: **19-08-2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು ಕಳೆದ 5 ವರ್ಷಗಳಿಂದ ತರೀಕೆರೆ ಆಸ್ಪತ್ರೆಯಲ್ಲಿ ತಜ್ಞ ವೈದ್ಯರಾಗಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ದಿ:14-03-2022 ರಂದು ಬೆಳಗ್ಗೆ 10-30 ರ ಸಮಯದಲ್ಲಿ ತರೀಕೆರೆ ಪೊಲೀಸ್ ಠಾಣೆಯ ಅಧಿಕಾರಿಗಳ ಕೋರಿಕೆ ಮೇರೆಗೆ ಮೃತ ಶಿವಪ್ಪ ಈತನ ಶವ ಪರೀಕ್ಷೆಯನ್ನು ನಮ್ಮ ಆಸ್ಪತ್ರೆಯ ಶವಾಗಾರದಲ್ಲಿ ಬೆಳಗ್ಗೆ 10-30 ರಿಂದ 11-30 ರ ಮದ್ಯದಲ್ಲಿ ಜರುಗಿಸಿದ್ದೇನೆ. ಮೃತ ದೇಹವನ್ನು ಪರೀಕ್ಷಿಸಲಾಗಿ,

1. ಅವರ ದೇಹದ ಮೇಲೆ ಎಡ ಕಂಕುಳ ಕೆಳಗೆ ತರಚಿದ ಗಾಯ.
2. ಎಡಗಾಲಿನ ಪಾದದ ಮೇಲೆ ತರಚಿದ ಗಾಯ.
3. ಎಡಭಾಗದ ಮೂರು ಪಕ್ಕೆಲುಬುಗಳ ಮುರಿತವಾಗಿ ಬೇರ್ಪಟ್ಟಿದ್ದವು.
4. ಶ್ವಾಸಕೋಶದ ಪದರ ಮತ್ತು ಎಡ ಶ್ವಾಸಕೋಶ ಡ್ಯಾಮೇಜ್ ಆಗಿದ್ದವು.
5. ದೇಹದ ಉಳಿದ ಭಾಗಗಳು ಮತ್ತು ಅಂಗಾಂಗಗಳು ಸುಸ್ಥಿತಿಯಲ್ಲಿದ್ದವು.

ನನ್ನ ಅಭಿಪ್ರಾಯದಲ್ಲಿ ಮೃತ ವ್ಯಕ್ತಿಯು ತೀವ್ರ ಆಘಾತದಿಂದ ಮತ್ತು ಶ್ವಾಸಕೋಶಕ್ಕಾದ ಗಾಯದಿಂದ ಮೃತಪಟ್ಟಿರುತ್ತಾನೆ. ಮರಣದ ಅವಧಿಯು 12 ತಾಸುಗಳಿಂದ 36 ತಾಸುಗಳ ಒಳಗಡೆ ಇತ್ತು. ಈ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ಸಲ್ಲಿಸಿದ್ದೇನೆ. ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-8 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ-8(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:</u>

ದೇಹದ ಮೇಲೆ ತರಚಿದ ಗಾಯಗಳು ಆದ ಕುರುಹುಗಳು ಮಾತ್ರ ಇದ್ದವು. ದೇಹವನ್ನು ಮುಟ್ಟಿ ಪರೀಕ್ಷಿಸಿದಾಗ ಮಾತ್ರ ಪಕ್ಕೆಲುಬು ಮುರಿತ ಗೊತ್ತಾಯಿತು, ಹೊರಗಿನಿಂದ ಕಾಣುತ್ತಿರಲಿಲ್ಲ. ಶ್ವಾಸಕೋಶದಿಂದ ರಕ್ತ ಹೊರಗೆ ಬಂದ ಬಗ್ಗೆ ಕುರುಹುಗಳು ಇರಲಿಲ್ಲ ಹೊರಭಾಗದಲ್ಲಿ ಗಾಯಗಳು ಇದ್ದವು. ಚರ್ಮದಿಂದ ಹೊರಗೆ ರಕ್ತ ಇರಲಿಲ್ಲ. ವ್ಯಕ್ತಿಯ ಮರಣ ಸಂಭವಿಸಿದ ತಕ್ಷಣದದಿಂದಲೇ ದೇಹದ ಒಳಗೆ ರಕ್ತ ಹೆಪ್ಪುಗಟ್ಟಲು ಪ್ರಾರಂಭ ಆಗುತ್ತದೆ. ಆಘಾತದಿಂದ ಮರಣ ಆಗಿರುವುದು ದೇಹದ ಹೊರಭಾಗ ಪರೀಕ್ಷೆ ಮಾಡಿದಾಗ ಗೊತ್ತಾಗುವುದಿಲ್ಲ ಎಂದರೆ ಸರಿ. ದೇಹದ ಹೊರಭಾಗದಲ್ಲಿ ಬಿದ್ದ ಪೆಟ್ಟಿನಿಂದ ಪಕ್ಕೆಲುಬುಗಳ ಮುರಿತ ಆಗಿದೆ. ಮೃತ ವ್ಯಕ್ತಿಗೆ ವಯಸ್ಸಾಗಿದ್ದರಿಂದ ಅವರಿಗೆ ವಯೋ ಸಹಜ ಬಿ.ಪಿ ಮತ್ತು ಶುಗರ್ ರೋಗಗಳು ಇದ್ದು, ಹಾರ್ಟ್ ಅಟ್ಯಾಕ್ ನಿಂದ ಅವರ ಮರಣ ಆಗಿದೆ ಎಂದರೆ ಸಾಕ್ಷಿಯು ಹಾರ್ಟ್ ಅಟ್ಯಾಕ್ ಮತ್ತು ಪಕ್ಕೆಲುಬುಗಳ ಮುರಿತ, ಶ್ವಾಸಕೋಶಕ್ಕೆ ಆದ ಗಾಯದಿಂದ ಮೃತಪಟ್ಟಿರುತ್ತಾರೆ ಎಂದು ಹೇಳುತ್ತಾರೆ. ಯಾವುದೇ ವ್ಯಕ್ತಿ ಎತ್ತರದ ಪ್ರದೇಶದಿಂದ ಕೆಳಗೆ ಒರಟಾದ ಪ್ರದೇಶದ ಮೇಲೆ ಬಿದ್ದಾಗ ಕೂಡ ಈ ತರಹದ ಸಾವುಗಳು ಸಂಭವಿಸಬಹುದು ಎಂದರೆ ಸರಿ. ಅಪಘಾತದಿಂದಲೇ ಮರಣ ಉಂಟಾಗಿದೆ ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಪೊಲೀಸರು ಅಪಘಾತದಲ್ಲಿ ಮರಣ ಆಗಿದೆ, ಶವ ಪರೀಕ್ಷೆ ಮಾಡಬೇಕು ಎಂದು ವರದಿ ಕೊಟ್ಟ ಮೇರೆಗೆ ನಾನು ಪಿ.ಎಂ ಮಾಡಿದ್ದೇನೆ ಎಂದರೆ ಸರಿ.

<u>ಮರುವಿಚಾರಣೆ:</u> ಇರುವುದಿಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಸಹಿ/-

*ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ*

*ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.*